ಆದಷ್ಟು ಬದಲಾವಣೆ ಮಾಡಿ ಭೂಮಿಯನ್ನು ತೆಗೆದುಕೊಂಡ ಕೂಡಲೇ ಪರಿಹಾರ ದ್ರವ್ಯವನ್ನು ಕೊಡುವ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ವಿಶ್ವನಾಥ ರೆಡ್ಡಿ.—ಅವಾರ್ಡ್ ಪಾಸ್ ಮಾಡುವುದಕ್ಕೆ ಕನಿಷ್ಠ ಒಂದೂವರೆ, ಎರಡು ವರ್ಷ ಹಿಡಿಯುತ್ತದೆ. ಅಲ್ಲಿಯವರೆಗೂ ರೆಂಟಲ್ ಕಾಂಪೆನ್‌ಸೇಷನ್ ಕೊಡುವುದನ್ನು ತೆಗೆದು ಹಾಕಿದರೆ ರೈತರಿಗೆ ತೊಂದರೆಯಾಗುತ್ತದೆಯಾದ್ದರಿಂದ ಅದನ್ನು ಪುನರ್‌ಪರಿಶೀಲನೆ ಮಾಡುತ್ತಾರೆಯೇ ? ಮತ್ತು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ಕೂಡಲೇ ಪರಿಹಾರ ದ್ರವ್ಯವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ನಾನು ಹೇಳಿದಂತೆ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡರೆ, ಅದಕ್ಕೆ ಪರಿಹಾರ ಎಷ್ಟರಮಟ್ಟಿಗೆ ಕೊಡಬೇಕಾಗುತ್ತದೆ ಅದನ್ನು ಕೊಡುವವರೆಗೂ ರೆಂಟಲ್ ಕಾಂಪೆನ್‌ಸೇಷನ್ ಕೊಡಲೇಬೇಕು. ಈಗ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ಕೂಡಲೇ ಪರಿಹಾರ ದ್ರವ್ಯವನ್ನು ಕೊಡತಕ್ಕ ವ್ಯವಸ್ಥೆ ಮಾಡುತ್ತಿದ್ದೇವೆ. ಅದು ಸಾಧ್ಯವಿಲ್ಲದೆ ಇರುವ ಸಂದರ್ಭದಲ್ಲಿ ರೆಂಟಲ್ ಕಾಂಪೆನ್‌ಸೇಷನ್ ಕೊಡುವುದಕ್ಕೆ ಬದಲಾಗಿ ಪರಿಹಾರ ದ್ರವ್ಯ ಎಷ್ಟು ಕೊಡಬಹುದೋ ಅದರಲ್ಲಿ ಶೇಕಡ 75 ಭಾಗದಷ್ಟಾದರೂ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕ ನ್ಯಾಯದಲ್ಲಿ ಕೊಡಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇವೆ.

N.R.W.S. SCHEME AT AYNUR

40. Sri S. M. SHEERNALY CHANDRASEKHAR (Hosanagar).—

Will the Minister for Community Development and Social Welfare be pleased to state :—

the reasons for the delay in the works of National Rural Water Supply Scheme at Aynur, Shimoga Taluk ?

Sri M. MALLIKARJUNA SWAMY (Minister for Community Development and Social Welfare).—

1. Due to delay in the payment of popular contribution of 10 per cent of the estimated cost by the panchayat concerned ; and

2. As there was no response to the tenders called for.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸಾರ್ವಜನಿಕರು ಮುಂದೆ ಬರದೆ, ಪಂಚಾಯಿತಿಯವರು ಜವಾಬ್ದಾರಿ ತೆಗೆದುಕೊಳ್ಳದೆ ಇರುವುದರಿಂದ ಕೆಲಸ ಪ್ರಾರಂಭವಾಗಿಲ್ಲ ಎಂದು ಹೇಳಿದ್ದಾರೆ. ಆದರೆ ಪಂಚಾಯಿತಿಯವರು ಜವಾಬ್ದಾರಿ ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದು ಸಾರ್ವಜನಿಕರು ಎಂತಿಗೆ ಕೊಡಬೇಕೋ ಅವನ್ನು ಕೊಚ್ಚಿದ್ದಾರೆ. ಆದರೆ ಇಲಾಖೆಯವರು ಕೆಲಸ ತೆಗೆದುಕೊಳ್ಳದೆ ಇರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪ್ರಾರಂಭದಲ್ಲಿ ಪಂಚಾಯಿತಿಯವರು ಮುಂದೆ ಬರಲಿಲ್ಲ. ಆಮೇಲೆ ಅವರು ಕೊಡಬೇಕಾದ ವಂತಿಗೆ 12,250 ರೂಪಾಯಿ ಕೊಟ್ಟರು. ಆಗ ಸರ್ಕಾರದವರು 16-6-69 ರಲ್ಲಿ ಮಂಜೂರಾತಿಯನ್ನು ಕೊಟ್ಟರು. ಮತ್ತೆ ಅಂದಾಜುಗಳು ಪುನರ್ವಿಮರ್ಶೆಯಾಗಬೇಕಾಗಿ ಬಂದು 2,05,700 ರೂಪಾಯಿಗಳಿಗೆ ಏರಿತು. ಆ ಪ್ರಕಾರ ಇನ್ನೂ 8320 ರೂಪಾಯಿ ಬಾಕಿ ಕೊಡಬೇಕಾದ ಪ್ರಯುಕ್ತ ಸರ್ಕಾರದವರು ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಮತ್ತೆ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಸಂಖ್ಯೆ 60 ಪರ್ಸೆಂಟ್ ಇದೆ ಎಂಬ ಗೊತ್ತಾವು ಮೇಲೆ ಮತ್ತೆ ಸರ್ಕಾರದವರು ಒಂದು ಆರ್ಡರ್ ಮಾಡಿ ಪಾಪ್ಯುಲರ್ ಕಾಂಟ್ರಿಬ್ಯೂಷನ್ ಕೊಡಬೇಕಾಗಿಲ್ಲ ಎಂದು ವಿನಾಯಿತಿಯನ್ನು ಕೂಡ ಕೊಟ್ಟಿದ್ದೇವೆ. ಆದಾದಮೇಲೆ ಕರೆಂಟ್ ಷೆಡ್ಯೂಲ್ ರೇಟ್ ಪ್ರಕಾರ ಮೂರನೆಯ ಸಲ 2,45,000 ರೂಪಾಯಿಗಳಿಗೆ ಅಂದಾಜುಗಳು ತಯಾ

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ರಾದುವು. ಅದಕ್ಕೆ 25-1-72 ರಲ್ಲಿ ಅಡ್ಮಿನಿಸ್ಟ್ರೇಟಿವ್ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಇದಾದ ಮೇಲೆ ಎರಡು ಸಲ 28-4-72 ಮತ್ತು 19-6-72 ರಂದು ಟೆಂಡರುಗಳನ್ನು ಕರೆಯ ಲಾಯಿತು. ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಯಾರೂ ಮುಂದೆ ಬರಲಿಲ್ಲ. ಆದರೆ ಈ ಕೆಲಸ ಆಗಲೇಬೇಕು ಎನ್ನುವ ದೃಷ್ಟಿಯಿಂದ ಸರ್ಕಾರದವರು ಈಗಾಗಲೇ ಚೀಫ್ ಇಂಜಿನಿಯರವರಿಗೆ ನಿರ್ದೇಶನವನ್ನು ಕೊಟ್ಟು ಆ ಕೆಲಸ ಪ್ರಾರಂಭವಾಗಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ಪೀಸ್ ವರ್ಕ್ ಮೇಲೆ ಕೆಲಸ ತೆಗೆದುಕೊಳ್ಳಬೇಕೆಂದು ಆರ್ಡರ್ ಮಾಡಲಾಗಿದೆ. ರೈಸಿಂಗ್ ಮೈನ್ಸ್, ಪಂಪ್‌ಹೌಸ್ ಇವುಗಳನ್ನೆಲ್ಲ ಪೀಸ್ ವರ್ಕ್ ಮೇಲೆ ತೆಗೆದುಕೊಳ್ಳಲಾಗಿದೆ. ಆರ್.ಸಿ.ಸಿ. ಓವರ್ ಹೆಡ್ ಟ್ಯಾಂಕ್ ಕಟ್ಟುವುದಕ್ಕೆ ಮಾತ್ರ ಏಜೆನ್ಸಿ ಇನ್ನೂ ಸಿಕ್ಕಿಲ್ಲ.

ಶ್ರೀ ಎಸ್. ಎಂ. ಶೀರನಾಳ ಚೆಂದ್ರಶೇಖರ್.—ಆರ್.ಸಿ.ಸಿ. ಓವರ್‌ಹೆಡ್ ಟ್ಯಾಂಕ್ ಕೆಲಸಕ್ಕೆ ಏಜೆನ್ಸಿ ಸಿಕ್ಕಿಲ್ಲವೆಂದು ಕೇಳಿದರು. ಯಾವುದಾದರೂ ಏಜೆನ್ಸಿಯನ್ನು ನಾನು ಒದಗಿಸಿದರೆ ಕೂಡಲೇ ಅದರ ಬಗ್ಗೆ ಆರ್ಡರ್ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸರಿಯಾದ ಏಜೆನ್ಸಿ ದೊರಕಿದರೆ ಅದರ ಬಗ್ಗೆ ಪರಿ ಶೀಲಿಸುತ್ತೇವೆ.

WORKING OF M.S.R.T.C. WORKSHOP AT GULBARGA

73. Sri PRABHAKAR TELKAR (Kelgi).—

Will the Minister for Labour be pleased to state :—

(*a*) whether the M.S.R.T.C. Workshop at Gulbarga is functioning ;

(*b*) if so, whether the Workshop has necessary machinery and equipments and trained Mechanics ;

(*c*) whether sufficient stock of spare parts required for vehicles is maintained ?

Sri AZEEZ SAIT (Minister for Labour).—

(*a*) Yes.

(*b*) Yes.

(*c*) There is a country-wide shortage of some critical parts.

Sri PRABHAKAR TELKAR.—It is stated in answer to (*a*) that Gulbarga Workshop is functioning ; but we find that in Gulbarga Division there are breakdowns and there is no workshop and no mechanics. Is it not a fact ?

† Sri AZEEZ SAIT.—There is divisional workshop. The whole difficulty in the past was that the divisional workshop was facing acute shortage of critical parts like pistons, tyres, bearings, etc. We made it a point to purchase them in the open market and that is the reason we were able to bring in more number of buses on the road. The workshop has sufficient spare parts worth about Rs. 6.98 lakhs as against 4.9 lakhs.